ಆಗಬೇಕಿದೆಯೆ? –ಹೀಗೆ ದಿನವೂ ನೂರಾರು ಪ್ರಶ್ನೆಗಳು ಮೂಡಿ ನಿಧನಿಧಾನವಾಗಿ ಆತನ ಮನಸ್ಸಿನ ಸ್ವಾಸ್ಥ್ಯವನ್ನೇ ಹಾಳು ಮಾಡಿಬಿಟ್ಟವು. ಕುಂತರೂ ನಿಂತರೂ ಅದೇ ಚಿಂತೆಯಲ್ಲಿರುತ್ತಿದ್ದ ಆತನಿಗೆ ಈ ಸಂದಿಗ್ಧದಿಂದ ಪಾರಾಗುವುದು ಹೇಗೆ?– ಎಂದು ತಿಳಿಯದೇ ಒಳಗೊಳಗೆ ಸಂಕಟಪಡತೊಡಗಿದ. ಆ ಸಂಕಟದಿಂದಾಗಿ ಹೇಗಾದರೂ ಸರಿ ಆ ಮುಖವನ್ನು ಪತ್ತೆ ಹಚ್ಚಿ, ಅದರ ಮರ್ಮವಾದರೂ ಏನೆಂದು ತಿಳಿಯಲು ನಿರ್ಧರಿಸಿದ. ಅಂತೆಯೇ, ಅದರ ಬೆನ್ನ ಹಿಂದಿನ ಸತ್ಯವನ್ನು ತಾನು ಕಾಣಲಾರದ ಗೋಡೆಯೊಳಗಿನ ಕನ್ನಡಿಯೊಳಗೆ ಅವಿತುಕೊಂಡಿರಬಹುದಾದ ಸಾಧ್ಯತೆಯ ಚುಂಗು ಹಿಡಿದು ಹುಡುಕತೊಡಗಿದ!

ಹೀಗಾಗಿ, ಕುಂತಲ್ಲಿ ನಿಂತಲ್ಲಿ, ಮನೆಯ ಒಳಗೆಹೊರಗೆ, ಅಲ್ಲದೇ ಬೆಳಗಿನ ಜಾವ ತನ್ನ ಹೆಂಡತಿಯೊಂದಿಗೆ ವಾಯುವಿಹಾರಕ್ಕೆಂದು ಉದ್ಯಾನಕ್ಕೆ ಹೋದಾಗ ಆ ಉದ್ಯಾನದ ತುಂಬೆಲ್ಲ ಕಣ್ಣಾಡಿಸುತ್ತಾ ಆ ಮುಖವನ್ನೇ ಹುಡುಕತೊಡಗಿದ. ದಿನ ಕಳೆದಂತೆ ಆತನಿಗೆ ಅದೊಂದು ಕೆಲಸವಾಗಿಯೇ ಹೋಯಿತು. ಅಷ್ಟರಮಟ್ಟಿಗೆ ಆತ ವಿಚಲಿತನಾಗಿ ಹೋದ. ಎಲ್ಲವನ್ನೂ ಮರೆತು ಅರೆಗಳಿಗೆ ಕಣ್ಮುಚ್ಚಿ ಕುಂತು ನಿರಾಳವಾಗಬೇಕೆಂದರೆ ಮತ್ತೇ ಏನೇನೋ ಯೋಚನೆಗಳು ತಲೆಯೊಳಗೆ ಬಂದು, 'ಅದೇ ಮುಖ, ಅದೇ ಮುಖ..!' ಎಂದು ತನಗಷ್ಟೇ ಕೇಳಿಸುವಂತೆ ತುಟಿಯೊಳಗೆ ಅಂದುಕೊಳ್ಳುತ್ತ ಗಾಬರಿ ಬೀಳತೊಡಗಿದ. ಆ ಗಾಬರಿಯಲ್ಲಿ, 'ದಿನವೂ ತನ್ನನ್ನು ಕೆಣಕದೆ ಆ ಮುಖಕ್ಕೆ ತಿಂದ ಅನ್ನ ಜೀರ್ಣವಾಗಲಾರದೇನೋ..!?' –ಎಂದು ತನ್ನ ಹೆಂಡತಿಯೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಂತಾಗ, ಮಾತಿನ ನಡುವೆ ತನಗೇ ಗೊತ್ತಿಲ್ಲದಂತೆ ಅಂದು ಆಕೆಯ ಮುಂದೆ ನಗೆಪಾಟಲಿಗೆ ಈಡಾಗತೊಡಗಿದ. ಕ್ರಮೇಣ ಇದೆಲ್ಲ ಆತನಿಗೆ ಅಭ್ಯಾಸವಾಗಿ ಹೋಯಿತಾದರೂ ವಿಷಯ ಮಾತ್ರ ಹೀಗೆ ಜಟಿಲವಾಗುತ್ತಾ ಹೋದಂತೆ ಆತನ ಮಾನಸಿಕ ನೆಮ್ಮದಿಯೇ ಹಾಳಾಗಿ ಹೋಯಿತು. ಆಗ ಆತನ ಹೆಂಡತಿಗೆ ಇದೆಲ್ಲ ಯಾಕಾಗಿ ಶುರುವಾಗಿದೆ ಎಂದು ಅರಿವಿಗೆ ಬಂದಿತೇನೋ ಎಂಬಂತೆ, 'ನಿನ್ನೊಳಗೊಂದು ಬೆಳಕಿದೆ. ಬೆಳಕಿನಂಥದ್ದು ಏನೋ ಇದೆ. ಅದು ಉದ್ದನೆಯ ನಿಲುವಂಗಿ ತೊಟ್ಟಂತೆ ನಿನ್ನನ್ನೇ ತೊಟ್ಟುಕೊಂಡು ನಿಂತಿದೆ! ನೀನು ಆ ಬೆಳಕನ್ನು ಅನುಭವಿಸು, ಆಗ ಎಂದೂ ಮುಗಿಯದ ದಾರಿಯೊಂದು ನಿನಗೆ ಕಾಣಿಸುತ್ತದೆ! ಆ ದಾರಿಯಲ್ಲಿ ನೀನು ನಡೆದಾಗ ಸುಖ –ದುಃಖಗಳ ಅನುಭವ ನಿನಗಾಗುವುದಿಲ್ಲ!' ಎಂದು ತಿಳಿ ಹೇಳಿದಳು. ಆದರೆ ಆ ಮಾತುಗಳೇನೂ ಆತನಿಗೆ ರುಚಿಸಲಿಲ್ಲ. ಕೊನೆ ಕೊನೆಗೆ ಆಕೆಗೂ ಕಗ್ಗಂಟಾಗಿ ಹೋದ.

ಈ ನಡುವೆ ಪವಾಡವೊಂದು ನಡೆಯಿತು. ಅದೊಂದು ದಿನ ಎಂದಿನಂತೆ ಬೆಳಗಿನ ಜಾವ ಉದ್ಯಾನದಲ್ಲಿ ಹೆಂಡತಿಯೊಂದಿಗೆ ವಾಯುವಿಹಾರ ಮಾಡುತ್ತಿರುವಾಗ ಹಿಂದಿನಿಂದ ಯಾರೋ ಆತನ ಭುಜವನ್ನು ಹಿಡಿದು ಎಳೆದಂತಾಯಿತು. ಆತ ಯಾರಿರಬಹುದು? – ಎಂದು ಹಿಂದಿರುಗಿ ನೋಡಲು ಆತನಿಗೆ ಇನ್ನಿಲ್ಲದ ಅಚ್ಚರಿಯಾಯಿತು. ಈ ಹಿಂದೆ ತಾನು ಎಲ್ಲೋ ನೋಡಿದ ಆ ವ್ಯಕ್ತಿ ತನ್ನನ್ನೇ ದಿಟ್ಟಿಸಿ ನೋಡುತ್ತಿರುವಂತೆ ಭಾಸವಾಗಲು ಅರೆಕ್ಷಣ ಗೊಂದಲಕ್ಕೀಡಾದ. ನಂತರ ಸುಧಾರಿಸಿಕೊಂಡು ಯೋಚಿಸತೊಡಗಿದ. ಅನುಮಾನವೇ ಇಲ್ಲ. ಅದೇ ವ್ಯಕ್ತಿ! ಸುಮಾರು ದಿನಗಳಿಂದ ತನ್ನನ್ನೇ ಹಿಂಬಾಲಿಸುತ್ತಿದ್ದ ಅದೇ ಮುಖ! ಈಗಲೂ ಹಾಗೇ ಇದೆ. ಮನಸ್ಸಿನಲ್ಲಿ ರೂಪ ಪಡೆದುಕೊಂಡಂತೆಯೇ ವಾಸ್ತವದಲ್ಲಿ ಕಣ್ಣಮುಂದೆಯೂ ಸಹ ಹಾಗೇ ಬಂದು ನಿಂತಿದೆ! ಆ ಮುಖದಲ್ಲಿ ಕಳೆ ಇಲ್ಲ; ನಗುವಿಲ್ಲ, ಎಂದಿನಂತೆ ಯಾವತ್ತಿನ ವಿಷಾದ ಮಡುಗಟ್ಟಿದೆ. ಉದ್ದನೆಯ ಬಿಳಿ ಬಣ್ಣದ ನಿಲುವಂಗಿ ತೊಟ್ಟಿದ್ದ, ಕೊರಳಲ್ಲಿ ಪಚ್ಚೆ ಹರಳಿನ ಸರವನ್ನು ಹಾಕಿಕೊಂಡಿದ್ದ ಆ ಮುಖವನ್ನು ಹೊತ್ತ ವ್ಯಕ್ತಿ, ತನ್ನ ಕೈಹಿಡಿದು ಎಳೆದು, 'ಬಾ, ಬಾ, ಹೋಗೋಣ ಬಾ...' ಎಂದು ಕರೆದಂತಾಗಲು ಹೌಹಾರಿದಂತಾದ! ಆ ಗಳಿಗೆಯಲ್ಲಿ, ಬೆಳಗಿನ ಅಂಥ ಚಳಿಯಲ್ಲಿ ಆತ ಕಟಕಟ ಬೆವೆತುಹೋದ. ಆಗ, ದಿನವೂ ತನ್ನನ್ನು ಬೆನ್ನು ಬಿದ್ದು ಕಾಡುತ್ತಿದ್ದ, ತನ್ನ ಲೌಕಿಕ ಬದುಕಿನ ದಾರಿ ಕೊನೆಗೊಳಿಸಲು ಬಂದವನೇನೋ ಇವನು ಎಂದುಕೊಂಡು, 'ಬರುವೆ ಇರೋ ಮಾರಾಯ! ಮನೆಯಲ್ಲಿ ಹೆಂಡತಿಗೆ ಇನ್ನೂ ಹೇಳಿಲ್ಲ. ಆಕೆಗೆ